ಬೋರ್ಡಿನವರು ಕೊಟ್ಟಿರುವುದು ೪.೮೮ ಲಕ್ಷ ರೂಪಾಯಿ ಆದ್ದರಿಂದ ಬೇರೆಯವರ ಕಡೆಯಿಂದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ಹೆಂಗಸಿನ ಜೊತೆ ಬೋರ್ಡಿನ ಅಧ್ಯಕ್ಷರು ಓಡಾಡುವುದನ್ನು ನಾನು ಅಬ್ಜೆಕ್ಷನ್ ಮಾಡುವುದಕ್ಕಾಗುವುದಿಲ್ಲ. ಒಂದು ಪಕ್ಷ ಹಪ್ಪಳ ಮಾಡದೇ ಇದ್ದರೆ, ಕೈಗಾರಿಕೆ ನಡೆಸದೇ ಇದ್ದರೆ ಅದರ ಬಗ್ಗೆ ಎನ್‌ಕ್ವಯರಿ ಮಾಡಿಸೋಣ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ವೆಂಕಟರಾಮಯ್ಯನವರು ಹೇಳುತ್ತಿರುವುದು ಆವರಂ ಹಪ್ಪಳ ಮಾಡುತ್ತಿದ್ದಾರೆ ಆಂತ ಅಲ್ಲ, ಲೋನನ್ನೇ ಹಪ್ಪಳ ಮಾಡುತ್ತಿದ್ದಾರೆ ೫೦:೫೦ ಪರ್ಸೆಂಟ್ ಮೇಲೆ. ಇದಕ್ಕಿಂತ ಘೋರವಾದ ಫಾರ್ಮುಲಾ ಜಗತ್ತಿನಲ್ಲಿ ಇಲ್ಲ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ತರಹ ಆಗುವುದಕ್ಕೆ ಬಿಡುವುದಿಲ್ಲ. ಸೀನಿಯರ್ ಆಫೀಸರ್ ಕೈಯಲ್ಲಿ ಎನ್‌ಕ್ವೈರಿ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಟರಾಮಯ್ಯ.—ಅಲ್ಲಿಯವರೆಗೆ ಹಪ್ಪಳ ಮಾಡುವುದನ್ನಾದರೂ ನಿಲ್ಲಿಸುತ್ತೀರಾ.

ಉಪಾಧ್ಯಕ್ಷರು.—ವೆಂಕಟರಾಮಯ್ಯನೋರೆ ಡಿಸ್ಕಷನ್‌ಗೆ ಅವಕಾಶ ಇಲ್ಲ, ದಯವಿಟ್ಟು ಕೂರಿ

ರಾಜ್ಯದ ರೇಷ್ಮೆ ಯೋಜನೆಯ ನೀಲಿ ನಕ್ಷೆಯು ವಿಷಯ

೧೪೦೧. ಶ್ರೀ ಜಿ. ರಾಜೂಗೌಡ (ಹಸೂರು).—ಕಾನೂನುಸಂಸದೀಯ ವ್ಯವಹಾರಗಳು ಹಾಗೂ ರೇಷ್ಮೆ ವ್ಯವಸಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದ ರೇಷ್ಮೆ ಯೋಜನೆಯು ಎರಡನೆ ಹಂತದ (ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್)ನೀಲಿ ನಕ್ಷೆ ತಯಾರಾಗಿದೆಯೇ.

ಆ) ಅದರ ಒಟ್ಟು ಅಂದಾಜು ವೆಚ್ಚ ಎಷ್ಟು ?

ಇ) ಉತ್ಪಾದನೆ ಬಾಬ್ತುಗಳ ವೆಚ್ಚ ಹಾಗೂ ಉತ್ಪಾದನೆಗಳಲ್ಲದ ಬಾಬ್ತುಗಳಿಗೆ ಎಷ್ಟು ವೆಚ್ಚವಾಗಲಿರುವ ವಿವರ ಒದಗಿಸುವುದು.

ಶ್ರೀ ಎ. ಲಕ್ಷ್ಮೀಸಾಗರ್ (ರೇಷ್ಮೆ ಖಾತೆ ಸಚಿವರು).—

ಅ) ತಯಾರಾಗಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಜಿ. ರಾಜುಗೌಡ.—ವಿಶ್ವಬ್ಯಾಂಕಿನ ನೆರವಿನ ಬಗ್ಗೆ ನೀವು ಎಷ್ಟು ನಿರೀಕ್ಷೆ ಮಾಡಿದ್ದೀರಿ ? ಅದು ಬಂದ ಮೇಲೇನಾದರೂ ನೀಲಿನಕ್ಷೆ ತಯಾರಿಸುತ್ತೀರಾ ? ಆ ಸಂದರ್ಭದಲ್ಲಿ ಸಂಬಂಧಪಟ್ಟ ಶಾಸಕರ ಜತೆ ಸಮಾಲೋಚನೆ ನಡೆಸುತ್ತೀರಾ? ಏಕೆಂದರೆ ಮೊದಲನೇ ಸಲ ಮಾಡುವಾಗ ಅನುತ್ಪಾದಕ ಬಾಬಿಗೆ ಜಾಸ್ತಿ ಮಾಡಿದ್ದೀರಿ, ಈ ಸಲವಾದರೂ ಉತ್ಪಾದನಾ ಬಾಬಿಗೆ ಜಾಸ್ತಿ ಮಾಡಿಸಿ.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಸಲಹೆಗಳು ಏನಿದ್ದರೂ ಮಹತ್ವದ ಸಲಹೆಗಳೆಂದು ಪೂರ್ಣವಾಗಿ ಬೆಲೆ ಕೊಟ್ಟು ಗಣನೆಗೆ ತೆಗೆದುಕೊಳ್ಳುತ್ತೇನೆ. ಅವರು ತಮ್ಮ ಸಲಹೆಗಳನ್ನು ನನಗೆ ಕಳಿಸಿಕೊಡಲಿ ಎಂದು ವಿನಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ರಾಜುಗೌಡ.—ಇದರಲ್ಲಿ ಅತಿ ಮುಖ್ಯವಾದದ್ದೆಂದರೆ ನೀಲಿನಕ್ಷೆ ತಯಾರು ಮಾಡುವಾಗ ಕಾಮನ್ ರೀಲಿಂಗ್ ಶೆಡ್‌ಗಳನ್ನು ಮಾಡಿದರೆ ಆಯಾ ಸ್ಥಳದಲ್ಲಿರುವ ರೇಷ್ಮೆ ಕೆಲಸ ಮಾಡುವ ಬಡವರಿಗೆ ಸಹಾಯ ಮಾಡಿದಂತಾಗುತ್ತದೆ. ಇದರ ಬಗ್ಗೆ ಕಳೆದ ನಾಲ್ಕು ವರ್ಷಗಳಿಂದ ಈ ಬಗ್ಗೆ ಕೇಳುತ್ತಿದ್ದೇನೆ. ಈಗಲಾದರೂ ಇದನ್ನು ಮಾಡಿಸುತ್ತೀರಾ ಸ್ವಾಮಿ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಡಿಪ್ಯಾಂಡ್ ಮೇಲೆ ಮಾತನಾಡುವಾಗ ರಾಜುಗೌಡರು ಈ ಸಲಹೆ ಕೊಟ್ಟಿದ್ದರು. ಅದಕ್ಕೆ ನಾನು ಉತ್ತರವನ್ನೂ ಕೊಟ್ಟಿದ್ದೆ. ಆಗ ಗಣನೆಗೆ ತೆಗೆದುಕೊಂಡು ಪರಿಶೀಲನೆ ಮಾಡುವುದಾಗಿ ತಿಳಿಸಿದ್ದೆ, ಅದೇ ಉತ್ತರವನ್ನು ಈಗಲೂ ಹೇಳಿದರೆ ಅವರು ಬೇಜಾರು ಮಾಡಿಕೊಳ್ಳಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ.